


# ಪುಸ್ತಕ ಸರಪಣಿ

ಪುಸ್ತಕಗಳನ್ನು ಸರಪಣಿಯಂತೆ ಸಾಲು ಸಾಲಾಗಿ ಜೋಡಿಸಿರುವುದು ಭಾರತದಲ್ಲಿ ಅಲ್ಲ. ಪ್ರತಿ ವರ್ಷವೂ ಜರ್ಮನಿಯ ಫ್ರಾಂಕ್‌ಫರ್ಟ್ ನಗರದಲ್ಲಿ ಅದ್ದೂರಿಯ ಪುಸ್ತಕ ಮೇಳ ನಡೆಯುತ್ತದೆ. ಜಗತ್ತಿನ ಅತಿ ದೊಡ್ಡ ಪುಸ್ತಕ ಮೇಳವೆಂಬ ಖ್ಯಾತಿಯನ್ನೂ ಅದು ಗಳಿಸಿದೆ. 7100ಕ್ಕೂ ಅಧಿಕ ಪ್ರಕಾಶಕರು ಇಲ್ಲಿಗೆ ಬಂದು ತಮ್ಮ ಪ್ರಕಟಣೆಗಳನ್ನು ಮಾರಾಟ ಮಾಡುತ್ತಾರೆ. ಕೊಳ್ಳಲು ಬರುವವರ ಸಂಖ್ಯೆಯೂ ಸಣ್ಣದಲ್ಲ, 2.70 ಲಕ್ಷದಷ್ಟು ಜನ ಬರುತ್ತಾರೆ.

ಇಲ್ಲಿ ಮಳಿಗೆಗಳಲ್ಲಿ ಪುಸ್ತಕಗಳನ್ನು ಬೇಕಾಬಿಟ್ಟಿ ರಾಶಿ ಹಾಕುವಂತಿಲ್ಲ. ಕಲಾತ್ಮಕವಾಗಿ ಹೂವಿನಂತೆಯೋ ಹೆಸರಾಂತ ಕಟ್ಟಡಗಳ ಆಕೃತಿಯಲ್ಲಿಯೋ ಜೋಡಿಸಬೇಕು. ಹೀಗೆ ಪುಸ್ತಕಗಳನ್ನು ಒಂದಕ್ಕೊಂದು ಸರಪಣಿಯ ಹಾಗೆ ಜೋಡಿಸಿ ಈ ವರ್ಷ ಗಿನ್ನೆಸ್ ದಾಖಲೆಯಲ್ಲಿ ಸೇರಿಕೊಂಡವರು ಹಾಫ್ಮನ್ ಉಂಡ್ ವೆರ್ಲಾಗ್. ಅವರು ಬೀಳದ ಹಾಗೆ ಜೋಡಿಸಿದ ಪುಸ್ತಕಗಳ ಸಂಖ್ಯೆ ಹತ್ತು ಸಾವಿರದ ಇನ್ನೂರು! ಈ ಹಿಂದೆ ಹೀಗೆ 9862 ಪುಸ್ತಕಗಳನ್ನು ಜೋಡಿಸಿ ದಾಖಲೆ ಬರೆದವರನ್ನು ಆತ ಹಿಂದಿಕ್ಕಿ, ಮೇಳಕ್ಕೆ ಬಂದವರಿಗೆ ಖುಷಿ ನೀಡಿದ್ದಾರೆ. ಏಳು ಸಾವಿರಕ್ಕೂ ಅಧಿಕ ಮಂದಿಯ ಪುಸ್ತಕ ಜೋಡಣೆಯ ಸಾಲಿನಲ್ಲಿ ಇವರದೊಂದು ವಿಕ್ರಮವೇ ಸರಿ.

■ ಪ. ರಾಮಕೃಷ್ಣ ಶಾಸ್ತ್ರಿ



